<u>ದಿನಾಂಕ **18.09.2024**</u>

**<u>ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದೆಃ</u>**

**<u>ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ</u>**

2.ಜೂನ್ ತಿಂಗಳು 2022 ನೇ ಇಸವಿಯಲ್ಲಿ ಆಲೂರಿನ ಶೇಖರ್ ಎಂಬುವವರ ಮನೆಯಲ್ಲಿ ಗಾರೆ ಕೆಲಸ ಮಾಡುತ್ತಿದ್ದೆ. ನನ್ನ ಜೊತೆ ಆ ಸಂದರ್ಭದಲ್ಲಿ ಬೇರೆ ಯಾರೂ ಕೆಲಸ ಮಾಡುತ್ತಿರಲಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ಇಲ್ಲ ಹಾಗೂ ಮೃತ ಆನಂದನ ಪರಿಚಯವಿಲ್ಲ. ಮೃತ ಆನಂದ ಯಾರ ಜೊತೆ ಏನು ಕೆಲಸ ಮಾಡುತ್ತಿದ್ದರು ಎಂಬುದು ನನಗೆ ಗೊತ್ತಿಲ್ಲ. ಮೃತ ಆನಂದ ಹೇಗೆ ಮೃತಪಟ್ಟರು ಎಂದು ಗೊತ್ತಿಲ್ಲ. ದೂರಿನಲ್ಲಿರುವ ಸಹಿ ನನ್ನದೇ. ಈ ಸಹಿಯನ್ನು ಪೊಲೀಸರು ಆಲೂರಿನ ಟೌನಿನಲ್ಲಿ ಪಡೆದುಕೊಂಡಿದ್ದಾರೆ. ದೂರನ್ನು ನಿಪಿ-1 ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ-1 ರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ. (ನ್ಯಾಯಾಲಯದ ಮುಂದೆ ಇರುವ ಸೀಲುಮಾಡಿರುವ ಎರಡು ವಸ್ತುಗಳನ್ನು ಒಡೆಯಲು ಅಭಿಯೋಜಕರು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಗಿ ಒಡೆಯಲಾಯಿತು). ಈಗ ತೋರಿಸಿದ ದೊಣ್ಣೆಯನ್ನು ಈ ಹಿಂದೆ ನೋಡಿಲ್ಲ. ಹಾಗೆಯೇ ಈಗ ತೋರಿಸಿದ ಸುತ್ತಿಗೆಯನ್ನು ಸಹ ನಾನು ಈ ಹಿಂದೆ ನೋಡಿಲ್ಲ.

**(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ. ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಅಭಿಯೋಜನೆಯ ಪರ ಕೇಸಿಗೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿಯುವುದು ಕಂಡುಬರುತ್ತದೆ, ಈ ಕಾರಣದಿಂದ ಮಾನ್ಯ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ).**

**<u>ಪಾಟೀಸವಾಲುಃ ಸರ್ಕಾರದ ಪರ ಮಾನ್ಯ ಅಭಿಯೋಜಕರಿಂದಃ</u>**

ಈ ದೂರು ಕೊಡುವುದಕ್ಕೆ ಪೂರ್ವದಲ್ಲಿ 5 ವರ್ಷಗಳಿಂದ ಕುಶಾಲನಗರದ ಸುತ್ತಮುತ್ತ ಗಾರೆಕೆಲಸ ಮಾಡುತ್ತಿದ್ದೆ ಎನ್ನುವುದು ನಿಜ. ಆದ್ದರಿಂದ ಕುಶಾಲನಗರದ ವಾಸಿ ನ್ಯಾಯಾಲಯದ ಮುಂದಿರುವ ಸತೀಶನ ಪರಿಚಯ ನನಗೆ ಆಗಿತ್ತು ಎಂದರೆ ಸರಿಯಲ್ಲ. ಸದರಿ ಸತೀಶ್ ಕೂಡ ಗಾರೆ ಕೆಲಸ ಮಾಡುತ್ತಿದ್ದಾರೆ ಎಂದರೆ ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತ ನನ್ನಲ್ಲಿ

ಎಲ್ಲಾದರೂ ಹೋಗಿ ಅಲ್ಲೇ ಉಳಿದುಕೊಂಡು ಕೆಲಸ ಮಾಡುವ ಎಂದು ಹೇಳಿದ್ದರು, ನಾನು ಅದಕ್ಕೆ ಒಪ್ಪಿಕೊಂಡೆ ಎಂದರೆ ಸುಳ್ಳು. ಒಪ್ಪಿಕೊಂಡ ನಂತರ ನಾನು, ಚಾಸಾ-2, 3, ಮೃತ ಆನಂದ ಹಾಗೂ ಆರೋಪಿತ ಆಲೂರು ತಾಲ್ಲೂಕು ಕೆ.ಹೊಸಕೋಟೆ ಹೋಬಳಿ ಕಿತ್ತಗೆರೆ ಗ್ರಾಮದ ಸದಾನಂದರವರ ಲೈನ್ ಮನೆಯ ಫೌಂಡೇಶನ್ ಕೆಲಸಕ್ಕೆ ಹೋದೆವು ಎಂದರೆ ಸರಿಯಲ್ಲ. ನಂತರ ನಾವೆಲ್ಲರೂ ಅಲ್ಲೇ ಕೆಲಸ ಮಾಡಿಕೊಂಡು ಲೈನ್ ಮನೆಯಲ್ಲೇ ವಾಸವಿದ್ದೆವು ಎಂದರೆ ಸರಿಯಲ್ಲ. ಆ ಲೈನ್ ಮನೆಯಲ್ಲಿ 2 ಭಾಗವಿದ್ದು ಒಂದು ಭಾಗದಲ್ಲಿ ಆರೋಪಿ ಮತ್ತು ಮೃತ ಆನಂದ ಇನ್ನೊಂದು ಭಾಗದಲ್ಲಿ ನಾನು, ಚಾಸಾ-2 ಮತ್ತು 3 ವಾಸವಿದ್ದೆವು ಎಂದರೆ ಸರಿಯಲ್ಲ. ನಮಗೆ ಪ್ರತಿದಿನ ಮದ್ಯಪಾನ ಮಾಡಲು ಆರೋಪಿ ಹೊಸಕೋಟೆಗೆ ಹೋಗಿ ಮದ್ಯ ತಂದುಕೊಡುತ್ತಿದ್ದ ಎಂದರೆ ಸರಿಯಲ್ಲ. ನಾವೆಲ್ಲರೂ ಒಟ್ಟಿಗೆ ಮದ್ಯಪಾನ ಮಾಡುತ್ತಿದ್ದೆವು, ಆರೋಪಿ ಮತ್ತು ಆನಂದ ಹೆಚ್ಚಿಗೆ ಮದ್ಯಪಾನ ಮಾಡಿ ಆಗಾಗ್ಗೆ ಗಲಾಟೆ ಮಾಡುತ್ತಿದ್ದರು ಎಂದರೆ ಸರಿಯಲ್ಲ.

2.ದಿನಾಂಕ 04.06.2022 ರಂದು ನಾವೆಲ್ಲರೂ ಫೌಂಡೇಶನ್ ಕೆಲಸ ಮಾಡಿಕೊಂಡು 7.00 ಗಂಟೆಗೆ ಕೆಲಸ ಮುಗಿಸಿದೆವು ಎಂದರೆ ಸುಳ್ಳು. ಅಂದೂ ಕೂಡ ಆರೋಪಿತ ಹೊಸಕೋಟೆಗೆ ಹೋಗಿ ಮದ್ಯ ತೆಗೆದುಕೊಂಡು ಬಂದರು, ನಾವೆಲ್ಲರೂ ಸೇರಿ ಮದ್ಯಪಾನ ಮಾಡಿದೆವು ಎಂದರೆ ಸರಿಯಲ್ಲ. ನಾವೆಲ್ಲರೂ ರಾತ್ರಿ 9.00 ಗಂಟೆಗೆ ಮಲಗಿದೆವು, ಆರೋಪಿ ಮತ್ತು ಮೃತ ಆನಂದ ಗಲಾಟೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ರಾತ್ರಿ 11 ಗಂಟೆ ಸುಮಾರಿಗೆ ಅಲ್ಲಿಗೆ ಬಂದು ಗಲಾಟೆ ಮಾಡಬೇಡಿ ಸುಮ್ಮನೆ ಮಲಗಿ ಎಂದು ಹೇಳಿದರೂ ಮೃತ ಆನಂದ ಆರೋಪಿತನಲ್ಲಿ ಇನ್ನೂ ಮದ್ಯ ಬೇಕು ಹೊಸಕೋಟೆಗೆ ಹೋಗಿ ಮದ್ಯ ತೆಗೆದುಕೊಂಡು ಬಾ ಎಂದು ಹೇಳಿ ಗಲಾಟೆ ಮಾಡುತ್ತಿದ್ದ ಎಂದರೆ ಸರಿಯಲ್ಲ. ಆಗ ಆರೋಪಿತ, ಈಗ ಕುಡಿದಿರುವ ಮದ್ಯವೇ ಸಾಕು, ಇನ್ನು ಯಾವ ಮದ್ಯ ಬೇಕು ಎಂದು ಅವಾಚ್ಯ ಶಬ್ದಗಳಿಂದ ಬೋಳಿಮಗನೆ ಸೂಳೆಮಗನೆ ಎಂದು ಬೈದು, ನೀನು ಬದುಕಿದ್ದರೆ ತಾನೇ ಮದ್ಯ ಕೇಳುವುದು ಮತ್ತು ಮದ್ಯ ಕುಡಿದು ನನ್ನೊಂದಿಗೆ ಗಲಾಟೆ ಮಾಡುವುದು ಎಂದು ಹೇಳಿ ಪಕ್ಕದಲ್ಲಿದ್ದ ಒಂದು ದೊಣ್ಣೆಯನ್ನು ಹಿಡಿದುಕೊಂಡು ಆತನ ತಲೆಗೆ ಮತ್ತು ಕೈಕಾಲುಗಳಿಗೆ ಹೊಡೆದು ಕೊಲೆ ಮಾಡಿದ್ದನ್ನು ನಾನು ಪ್ರತ್ಯಕ್ಷ ನೋಡಿದ್ದೇನೆ ಎಂದರೆ ಸರಿಯಲ್ಲ. ಆಗ ಆರೋಪಿತ ಮೃತ ಆನಂದನ ಶವವನ್ನು ಫೌಂಡೇಶನ್ ಮೇಲೆ ಮಲಗಿಸಿ ಈ ವಿಚಾರವನ್ನು ಯಾರಿಗಾದರೂ ಹೇಳಿದರೆ ನಿಮಗೂ ಇದೇ ಗತಿ ಕಾಣಿಸುತ್ತೇನೆ ಎಂದು ಹೆದರಿಸಿದ ಎಂದರೆ ಸರಿಯಲ್ಲ. ಈ ವಿಚಾರವಾಗಿ ನಾನು ಪೊಲೀಸರಿಗೆ ನಿಪಿ-1 ರಂತೆ ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಈ ಕುರಿತು ಪೊಲೀಸರು 09.06.2022 ರಂದು ಪೊಲೀಸರು ನನ್ನನ್ನು ವಿಚಾರಿಸಿ ಮರುಹೇಳಿಕೆ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯಲ್ಲಿ ನಾನು " ದಿನಾಂಕ 08.06.22 ರಿಂದ ----------------------ನನ್ನ ಮರುಹೇಳಿಕೆ ನೀಡಿರುತ್ತೇನೆ" ಎಂದು ಮರು

ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮರುಹೇಳಿಕೆಯ ಭಾಗವನ್ನು ನಿಶಾನೆ ಪಿ-2 ಎಂದು ಗುರುತಿಸಲಾಯಿತು. ನಿಪಿ-2 ಹೇಳಿಕೆಯಲ್ಲಿ ನಾನು ಮುಂದುವರೆದು ಆರೋಪಿತ ದೊಣ್ಣೆ ಮತ್ತು ಕಬ್ಬಿಣದ ಸುತ್ತಿಗೆಯಿಂದ ಮೃತ ಆನಂದನಿಗೆ ಹೊಡೆದು ಕೊಲೆ ಮಾಡಿದ್ದಾನೆ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿದ್ದರೂ, ನಿಪಿ-1 ರಂತೆ ದೂರು ನೀಡಿ ನಿಪಿ-2 ರಂತೆ ಮರುಹೇಳಿಕೆ ಕೊಟ್ಟಿದ್ದರೂ, ಆರೋಪಿತನೊಂದಿಗೆ ಕೆಲಸ ಮಾಡುತ್ತಿರುವುದರಿಂದ ಆತನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ- ಆರೋಪಿ ಪರ ವಕೀಲರಿಂದಃ-</u>**

ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**